ಆರ್ಥಿಕ ಶಕ್ತಿ ಮತ್ತು ಸಾಮರಿಕ ಶಕ್ತಿ ಎರಡೂ ಒಂದು ಕಡೆ ಮೇಳೈಸಿದಾಗ ಅದು ಎಲ್ಲ ರೀತಿಯ ವ್ಯಾಪಕ ಪ್ರಭಾವವನ್ನು ಬೀರಲು ಪ್ರಾರಂಭಿಸುತ್ತದೆ. ಉದಾಹರಣೆಗೆ, ಅಮೆರಿಕದಲ್ಲೇ ಇರಬಹುದಾದ – ಪರಿಸರ ಸ್ನೇಹಿ, ಸಸ್ಯಾಹಾರಿ, ಪ್ಲಾಸ್ಟಿಕ್ ವಿರೋಧಿ, ಇಂಗಾಲ ವಿಸರ್ಜನೆಯ ಬಗ್ಗೆ ಕಾಳಜಿಯಿರುವ ಪ್ರೊಫೆಸರ್ ಕೂಡ, ಆ ವಿಶ್ವವಿದ್ಯಾಲಯಕ್ಕೆ ಬರುತ್ತಿರುವ ದೇಣಿಗೆ, ಅಲ್ಲಿನ ಸ್ಥಾನಮಾನದಿಂದಾಗಿ ನಿರ್ದೇಶಿಸಬಹುದಾದ ಸಂಶೋಧನಾ ವಿಷಯಗಳ ಅಜೆಂಡಾ, ಹಾಗೂ ವಿಶ್ವದ ಬೌದ್ಧಿಕ ಜಗತ್ತಿನ ಮೇಲೆ ಪ್ರಭಾವವನ್ನು ಬೀರುತ್ತಾರೆ. ಈ ಎಲ್ಲದರ ಮೂಲದಲ್ಲಿರುವುದು ನೈಸರ್ಗಿಕ ಸಂಪನ್ಮೂಲಗಳ ಅಸ್ತಿತ್ವ ಮತ್ತು ಅದಕ್ಕಿಂತ ಹೆಚ್ಚು ಅದನ್ನು ನಿಯಂತ್ರಿಸುವ ಶಕ್ತಿ. ಉದಾಹರಣೆಗೆ, ಕೊಲ್ಲಿ ದೇಶಗಳ ಬಳಿ ತೈಲ ನಿಕ್ಷೇಪಗಳಿರಬಹುದು. ಆದರೆ, ಆ ನಿಕ್ಷೇಪಗಳನ್ನು ಹೊರತೆಗೆದು ಶಕ್ತಿಯಾಗಿ ಪರಿವರ್ತಿಸಲು ಬೇಕಿರುವ ಹೂಡಿಕೆ ಮತ್ತು ತಂತ್ರಜ್ಞಾನವಿರುವುದು ಅನಾದಿ ಕಾಲದಿಂದ ಆಕ್ರಮಣ ಮಾಡುತ್ತಲೇ ಬೆಳೆದಿರುವ ಪಾಶ್ಚಾತ್ಯ ಲೋಕದಲ್ಲಿ. ಹಿಂದೆ ಆಕ್ರಮಣ ಸೈನ್ಯದ ಮೂಲಕ ಆಗುತ್ತಿತ್ತು. ಈಗ ಸೈನ್ಯದ ಶಕ್ತಿಯನ್ನು ಬಳಸದೇ, ಬರೇ ಶಕ್ತಿ ಪ್ರದರ್ಶನದ ಸಂಭಾವ್ಯತೆ ಸೂಚಿಸುತ್ತಲೇ, ಬೌದ್ಧಿಕ ಮತ್ತು ಸಾಂಸ್ಕೃತಿಕ ಆಕ್ರಮಣ ಮಾಡಬಹುದಾಗಿದೆ. ಈ ಎಲ್ಲದರ ಮೂಲದಲ್ಲಿರುವುದು ಅತ್ಯಮೂಲ್ಯವಾದ ಹಾಗೂ ನಿರಂತರವಾಗಿ ನಮಗೆ ದಕ್ಕದಂತಹ, ನಿಯಮಿತ ಪರಿಮಾಣದಲ್ಲಿರುವ ಸಂಪನ್ಮೂಲಗಳ ಮೇಲೆ ಇರುವ ಸ್ವಾಮಿತ್ವ ಮತ್ತು ಪ್ರಭಾವ.

ಹದಿನೇಳನೆಯ ಶತಮಾನದಲ್ಲಿ ಜಾಯಿಕಾಯಿ ಮತ್ತು ಜಾಪತ್ರೆಯ ಮೇಲೆ ಸ್ವಾಮಿತ್ವವನ್ನು ಪಡೆಯಲು ಸೆಣೆಸಿದ ಪೋರ್ಚುಗೀಸರ ಘಟನೆಯ ಮೂಲಕ ಜಗತ್ತಿನ ನಾಶದತ್ತ ಸಾಗಿರುವ ನಮ್ಮ ನಾಗರಿಕತೆಯ ಬಗ್ಗೆ ಇದು ಒಂದು ಬಹಳ ಪ್ರಭಾವಶಾಲಿಯಾದ ಟಿಪ್ಪಣಿಯಾಗಿದೆ. ಕಳೆದ ಐವತ್ತು ವರ್ಷಗಳಲ್ಲಿ ನಾವು ನಮ್ಮ ಪರಿಸರವನ್ನು ನಾಶ ಮಾಡುವ ಗತಿ ತುಂಬಾ ತೀವ್ರತರದ್ದು ಎಂದು ಅಮಿತಾವ್ ವಾದಿಸುತ್ತಾರೆ. ಅವರು ಇದಕ್ಕೆ ಕೊಡುವ ಹೆಸರು – ಸರ್ವವ್ಯಾಪಿ ಹತ್ಯೆ (omnicide). ಹತ್ಯೆ, ಆತ್ಮಹತ್ಯೆ, ನರಸಂಹಾರಕ್ಕೂ ಮೀರಿದ್ದು ಈ ಸರ್ವಹತ್ಯೆ. ಪ್ರಾಣಿಗಳು, ಗಿಡಮರಗಳು, ಸಂಪನ್ಮೂಲಗಳು ಮತ್ತು ನಿಸರ್ಗ ಒಂದು ಜೀವಂತ ವ್ಯವಸ್ಥೆಯೆಂದು ಗುರುತಿಸದ ಹೊರತು, ನಾವು ಜಾಯಿಕಾಯಿ ಜಾಪತ್ರೆಯನ್ನು ಹುಡುಕುತ್ತಾ – ಒಂದು ಮಸಾಲೆ ಮತ್ತು ಅದರ ವ್ಯಾಪಾರದಿಂದ ಬರಬಹುದಾದ ಆರ್ಥಿಕ ಶಕ್ತಿಯನ್ನು ಪಡೆಯಲು ಸಾಮರಿಕ ಶಕ್ತಿಯನ್ನು ಪ್ರದರ್ಶಿಸುತ್ತಾ, ಪರಿಸರವನ್ನೇ ಸ್ವಾಹಾ ಮಾಡುತ್ತಿರುವ ಸಮಯವಿದು.

ಚರಿತ್ರೆ, ರಾಜಕೀಯ, ಜೀವಶಾಸ್ತ್ರ, ಮಾನವ ಶಾಸ್ತ್ರ, ಸಮಾಜಶಾಸ್ತ್ರ – ಎಲ್ಲವನ್ನೂ ಒಳಗೊಳ್ಳುತ್ತಾ ಅದನ್ನು ವ್ಯಾಖ್ಯಾನಿಸಲು ಪದ್ಯ, ಕಥೆ-ಕಾದಂಬರಿಗಳನ್ನು ಉಲ್ಲೇಖಿಸುತ್ತಾ, ನಮ್ಮ ಜಗತ್ತು ಸಾಗುತ್ತಿರುವ ದಿಕ್ಕನ್ನು ಈ ಪುಸ್ತಕ ಸಶಕ್ತವಾಗಿ ದಾಖಲಿಸುತ್ತದೆ. ಪರಿಸರಕ್ಕೆ ಯಾವುದೇ ದೇಶದ ಸರಹದ್ದುಗಳಿಲ್ಲ. ಆದರೆ ಭೌಗೋಳಿಕ ಸರಹದ್ದು ಎಂದು ಗುರುತಿಸಿರುವ ಸಿಯಾಚಿನ್ ಹಿಮನದಿಯ ಪ್ರಾಂತ್ಯದಲ್ಲಿ ಕೊರೆಯುತ್ತಿರುವ ತಾಪಮಾನದಲ್ಲಿ ಸೈನಿಕರನ್ನು ಬಲಿಕೊಡುತ್ತ, ಪರಿಸರಕ್ಕೆ ಧಕ್ಕೆ ತರುತ್ತಲೇ ಒಂದು ಸೈನ್ಯದ ಸ್ಥಾವರವನ್ನು ನಿರ್ಮಿಸಬೇಕಿರುವ ವಿರೋಧಾಭಾಸವೇ, ನಮ್ಮ ಕಾಲದ ಸರ್ವಹತ್ಯೆಯ ಪ್ರತೀಕವಾಗಿ ನಿಲ್ಲುತ್ತದೆ. ಸೃಜನಶೀಲ ಬರಹಗಾರನೊಬ್ಬ, ತನ್ನ ಭಾಷೆಯನ್ನೂ ಕಾಳಜಿಗಳನ್ನೂ ಮೇಳೈಸಿ ಸಾಹಿತ್ಯವನ್ನು ರಚಿಸಿದಾಗ ಅದು ಬರಹಲೋಕದಲ್ಲಿ ನಿರ್ಮಿಸಿಕೊಂಡಿರುವ ಫಿಕ್ಷನ್-ನಾನ್ ಫಿಕ್ಷನ್, ವಿಜ್ಞಾನ, ಸಮಾಜಶಾಸ್ತ್ರ, ಚರಿತ್ರೆಯ ಚೌಕಟ್ಟುಗಳನ್ನು ಮುರಿಯುತ್ತದೆ. ಹೀಗೆ ಆ ಚೌಕಟ್ಟುಗಳನ್ನು ಮುರಿಯುತ್ತಲೇ ಪರಿಸರದ ಸರ್ವವ್ಯಾಪಿ – ಬಂಧನರಹಿತ, ಸರಹದ್ದಿಲ್ಲದ ಕಾಳಜಿಯನ್ನು ಗ್ರಹಿಸುವಲ್ಲಿ ಅಮಿತಾವ್ ಸಫಲರಾಗುತ್ತಾರೆ. ಇದು ಒಂದು ಭಯಾನಕ ಕನಸನ್ನು ನನಸುಮಾಡಲು ಹೊರಟಿರುವ ಪುಸ್ತಕ. ನಮ್ಮದೇ ನಾಶವನ್ನು ನಾವೇ ಒಂದು ಚಲನಚಿತ್ರವಾಗಿ ನಿರ್ಮಿಸಿ, ಅದನ್ನು ನೋಡುತ್ತಾ, ಅದು ಕೇವಲ ಭ್ರಮೆಯೆಂದು ನಂಬಿ ಖುಷಿಯಿಂದಿರುವ ವಿರೋಧಾಭಾಸವನ್ನು ನಮ್ಮ ಮುಂದಿಡುತ್ತದೆ. ಪರಿಸರದ ಬಗ್ಗೆ ಪರಿಸರ ವಿಜ್ಞಾನಿಗಳು ಬರೆಯುವುದಕ್ಕಿಂತ ಭಿನ್ನವಾಗಿ ಶಕ್ತವಾಗಿ ಅಮಿತಾವ್ ಬರೆಯುತ್ತಾರೆ. ಒಬ್ಬ ಕಥಾಕಾರನ ಪ್ರಭಾವವಿರುವುದೇ ನಮ್ಮ ಎದುರಿನ ಸವಾಲುಗಳನ್ನು ಮನದಟ್ಟು ಮಾಡುವಂತೆ ಬಿತ್ತರಿಸುವ ಕಲೆಯಲ್ಲಿ. ಅದು ಅವರಿಗೆ ದಕ್ಕಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ●